ಬಿಟ್ಟರೆ ಆ ಮನೆಯಲ್ಲಿ ಏನೆಂದರೂ ಏನೂ ಇರಲಿಲ್ಲ! ಇಂತಿಪ್ಪ ಈ ಮನೆಯಲ್ಲಿ ಐದಾರು ಒಡಕು ಭಾಂಡೆಗಳನ್ನಿಟ್ಟುಕೊಂಡು, ಜಲುಮದ ಮೇಲೆ ಯಾಪವನ್ನೇ ಬೆಳೆಸಿಕೊಂಡಿರದಿದ್ದ ಶಂಕ್ರ್ಯಾನೊಂದಿಗೆ, ವಯಸ್ಸಾದ ಕಾರಣ ಸ್ಮಶಾನ ಸೇರಲು ಸಜ್ಜಾಗಿ ಕುಂತವರಂತೆ ದಿನಗಳನ್ನು ಎಣಿಸುತ್ತಿದ್ದ ತನ್ನ ಅತ್ತೆಯನ್ನು ಕಟ್ಟಿಕೊಂಡು ಜಲುಮ ತೆಗೆಯುವಂಥ ಪರಿಸ್ಥಿತಿಯನ್ನು ತಂದಿಟ್ಟ ತನ್ನಪ್ಪನಿಗೆ ಮಲ್ಲವ್ವ ದಿನವೂ ಹಿಡಿಶಾಪ ಹಾಕುತ್ತಿದ್ದಳು. ಆದರೆ, ಆಕೆಯ ತೌರುಮನೆಯಲ್ಲಿದ್ದ ಬಡತನ, ಹಸಿವು, ದಾರಿದ್ರ್ಯಗಳ ಕಾರಣವಾಗಿಯೇ ತನ್ನಪ್ಪ, ಒಬ್ಬನೇ ಗಂಡಸುಮಗ ಇರುವ ಈ ಮನೆಯಲ್ಲಾದರೂ ತನ್ನ ಮಗಳು ಮಲ್ಲವ್ವ ಸುಖವಾಗಿರಲೆಂದುಕೊಂಡು ಶಂಕ್ರ್ಯಾನ ಕೊರಳಿಗೆ ತನ್ನನ್ನು ಕಟ್ಟಿದ್ದಾನೆ ಎಂಬ ಸತ್ಯದ ಅರಿವಾಗಿ ಆಕೆ ತನ್ನಪ್ಪನ ವಿಚಾರದಲ್ಲಿ ಒಳಗೊಳಗೇ ಮರುಗುತ್ತಿದ್ದಳು. ಆದರೆ, ವಿಧಿ ಮಾತ್ರ ಮತ್ತೆ ಮತ್ತೆ ಆಕೆಯ ವಿರುದ್ಧವೇ ಸಂಚು ರೂಪಿಸುತ್ತಿತ್ತು.

ಮಲ್ಲವ್ವನನ್ನು ಮದುವೆಯಾದ ಹೊಸದರಲ್ಲಿ ವರ್ಷಾರು ತಿಂಗಳಷ್ಟೇ ಚೆಂದಾಗಿ ಸಂಸಾರ ಮಾಡಿಕೊಂಡಿದ್ದ ಶಂಕ್ರ್ಯಾ, ಬರುಬರುತ್ತ ತನ್ನ ಹಳೆಯ ಚಾಳಿಯನ್ನು ಶುರು ಮಾಡಿದ. ಎಲ್ಲ ಚಟಗಳನ್ನು ಮೈಗೂಡಿಸಿಕೊಂಡಿದ್ದ ಆತ ವಾರಾನುಗಟ್ಟಲೆ ದುಡಿದು ತಂದ ಪಗಾರನ್ನು ಮಲ್ಲವ್ವನ ಕೈಗೆ ತಂದುಕೊಡದೇ ತನ್ನ ಚಟಗಳನ್ನು ಪೂರೈಸಿಕೊಳ್ಳತೊಡಗಿದ. ಇದು ಮಲ್ಲವ್ವನನ್ನು ಚಿಂತೆಯಾಗಿ ಕಾಡತೊಡಗಿತು. ಆಗ, ಆಕೆ ಶಂಕ್ರ್ಯಾನನ್ನು ದುಡಿದ ಪಗಾರನ್ನು ಕೇಳತೊಡಗಿದಾಗ ಆಕೆಯನ್ನು ಕುಡಿದ ನಿಶೆಯಲ್ಲಿ ಹೊಡೆಯುವುದು ಬಡಿಯುವುದು ಮಾಡತೊಡಗಿದ. ಇದರಿಂದಾಗಿ ಅಡುಗೆ ಮಾಡಲು ಕಾಳುಕಡಿ, ಕಾಯಿಪಲ್ಲೆ ಮತ್ತು ಕಿರಾಣಿ ಸಾಮಾನು ಇಲ್ಲದಂತಾಗಿ ಒಲೆ ಹೊತ್ತಿಸುವುದೇ ದುಸ್ತರವಾಗಿಬಿಟ್ಟಿತು. ಆಗೆಲ್ಲ ವಿಧಿಯಿಲ್ಲದೇ ಮಲ್ಲವ್ವ ನೆರೆಹೊರೆಯವರಿಂದ ಹಿಟ್ಟು ಬೇಡಿ ತಂದು, ಉಪ್ಪುಗಂಜಿ ಮಾಡಿ, ಅತ್ತೆಗೊಂದಿಷ್ಟು ಕೊಟ್ಟು ತಾನೂ ಕುಡಿದು ದಿನ ಸವೆಸತೊಡಗಿದಳು. ವಿಚಾರ ಹೀಗಿರಲು ಕ್ರಮೇಣ ಶಂಕ್ರ್ಯಾನ ಈ ಥರದ ವರ್ತನೆ ಮಲ್ಲವ್ವನ ಅತ್ತೆಗೂ ಬೇಸರ ತರಿಸತೊಡಗಿತು. ಆ ಬೇಸರದಿಂದಾಗಿ ಆಕೆ ಬದುಕನ್ನು ಮುನ್ನಡೆಸುವುದಕ್ಕಾಗಿ ಮಲ್ಲವ್ವ ಪಡುತ್ತಿದ್ದ ಕಷ್ಟವನ್ನು ಕಂಡು ಒಳಗೊಳಗೆ ಸಂಕಟಪಡುತ್ತಿದ್ದಳು. ಆದರೆ, ಮುಂದೊಂದು ದಿನ ಅದೇ ಸಂಕಟವನ್ನು ಎದೆಯೊಳಗೆ ತುಂಬಿಕೊಂಡು ಶಾಶ್ವತವಾಗಿ ಊರ ಹೊರಗಿರೋ ಸ್ಮಶಾನದಲ್ಲಿ ಹೋಗಿ ಕುಂತುಬಿಟ್ಟಳು. ಆಗಲೇ, ಸಂಬಂಧದ ಎಲ್ಲ ಎಳೆಗಳು ಕಳಚಿಕೊಂಡಂಥ ಭಾವ ಶಂಕ್ರ್ಯಾನನ್ನು ಕಾಡತೊಡಗಲು ತುಸು ದಿನ ಮನೆ ಹಿಡಿದ. ಹಾಗೆಯೇ ಒಂದಿಷ್ಟು ದಿನ ಎಲ್ಲ ಚಟಗಳನ್ನು ತೊರೆದು ವಾರ ವಾರವೂ ದುಡಿದು ತಂದ ಪಗಾರನ್ನು ಮಲ್ಲವ್ವನ ಕೈಯಲ್ಲಿ ಕೊಡತೊಡಗಿದ. ಆಗ ಬದುಕು ಸುಸೂತ್ರವಾಗಿ ನಡೆಯತೊಡಗಲು ಮಲ್ಲವ್ವನಿಗೂ ಸಮಾಧಾನವೆನಿಸಿತು. ಆದರೆ, ಆ



ಸಮಾಧಾನ ಮಾತ್ರ ಆಕೆಯ ಪಾಲಿಗೆ ಬಹಳ ದಿನ ಉಳಿಯಲಿಲ್ಲ!

***

ಮಲ್ಲವ್ವ, ಪರಮೇಶಿಯನ್ನು ಹೊಟ್ಟೀಲೆ ನಿಲ್ಲುವುದರೊಳಗೆ ಆಕೆಯ ಅತ್ತೆ ಇನ್ನಿಲ್ಲವಾಗಿ ಹೆಚ್ಚೂಕಮ್ಮೀ ಎರಡು ವರ್ಷಗಳೇ ಆಗಿದ್ದವು. ಹೀಗೆ, ತನ್ನ ಬದುಕಿನಲ್ಲಿ ಎಲ್ಲವನ್ನೂ ಕಳೆದುಕೊಳ್ಳುತ್ತಲೇ ಬಂದಿದ್ದ ಆಕೆಗೆ ತಾನು ಹೊಟ್ಟೀಲೆ ನಿಂತ ವಿಚಾರ ಇನ್ನಿಲ್ಲದ ಸಂಭ್ರಮವನ್ನುಂಟು ಮಾಡಿತ್ತು. ಆ ಸಂಭ್ರಮದಲ್ಲಿ ತಾನು ದಾಟಿ ಬಂದ ಬದುಕಿನಲ್ಲಿ ಉಂಡ ಕಹಿ ನೆನಪುಗಳನ್ನೆಲ್ಲ ಮರೆತು ಇನ್ನಾದರೂ ಸುಖವಾಗಿರಬೇಕೆಂದುಕೊಂಡಿದ್ದಳು. ಆದರೆ, ವಿಧಿ ವಿಪರೀತ ಎಂಬಂತೆ ಶಂಕ್ರ್ಯಾ ಮತ್ತೇ ತನ್ನ ಹಳೇ ಚಾಳಿಯನ್ನೇ ಶುರುವಿಟ್ಟುಕೊಂಡ. ತಾನು ಅಪ್ಪನಾಗುತ್ತಿದ್ದೇನೆ ಎಂಬ ಖುಷಿಯಲ್ಲಿ ಸೆರೆ ಕುಡಿತದ ಚಟವನ್ನು ಶುರು ಮಾಡಿದ. ಹಾಗೆ ಕುಡಿದ ನಿಶೆಯಲ್ಲಿ ರಾತ್ರಿ ಹೊತ್ತಲ್ಲದ ಹೊತ್ತಿನಲ್ಲಿ ಮನೆಗೆ ಬಂದು ಮಲ್ಲವ್ವನೊಂದಿಗೆ ಜಗಳ ಮಾಡತೊಡಗಿದ. ಇದರೊಂದಿಗೆ ಆತ ದುಡಿದ ಪಗಾರನ್ನು ತನ್ನ ಕೈಯಲ್ಲಿ ತಂದುಕೊಡದದ್ದಕ್ಕಾಗಿ ಆಕೆಗೆ ಮನೆಯನ್ನು ನಡೆಸುವುದು ದುಸ್ತರವಾಗಿಬಿಟ್ಟಿತು. ಇದೆಲ್ಲ ಕ್ರಮೇಣ ಮಲ್ಲವ್ವನನ್ನು ಆತಂಕಕ್ಕೀಡು ಮಾಡತೊಡಗಿತು. ಇದರಿಂದಾಗಿ ಆಕೆ ವಿಧಿಯಿಲ್ಲದೇ ಏಳೆಂಟು ತಿಂಗಳ ಹೊಟ್ಟೆಯನ್ನು ಹೊತ್ತುಕೊಂಡು, ರೊಟ್ಟಿ ಅಂಗಡಿಯನ್ನು ನಡೆಸುತ್ತಿದ್ದ ಬಾಜೂ ಮನೆಯ ನೀಲವ್ವನ ಕೈಯಲ್ಲಿ ದಿನದ ಪಗಾರದ ಮೇಲೆ ಕಟಿರೊಟ್ಟಿ ಮಾಡಲು ಹೋಗತೊಡಗಿದಳು. ಆಮೇಲೆಯೇ ಮಲ್ಲವ್ವನಿಗೆ ಬದುಕು ಒಂದಿಷ್ಟು ಸಹನೀಯವೆನಿಸತೊಡಗಲು ತುಸು ನಿರಾಳಳಾದಳು. ಹೀಗೆ, ಆಕೆಯ ಬದುಕು ಒಂದು ನೆಲೆಗೆ ಬಂದು ನಿಂತಿತು ಎನ್ನುವಾಗಲೇ ಅದೊಂದು ದಿನ ಶಂಕ್ರ್ಯಾ ಇದ್ದಕ್ಕಿದ್ದಂಗೆ ಮಹಾರಾಷ್ಟ್ರದ ಸಾತಾರ ಪಟ್ಟಣಕ್ಕೆ ದುಡಿಯಲು ಹೋಗುತ್ತೇನೆ ಎಂದು ಮಲ್ಲವ್ವನಿಗೆ ಹೇಳಿ ಹೊರಟು ಹೋಗಿಯೇಬಿಟ್ಟಿದ್ದ!

ಆಕೆಗೆ ಹಾಗೆ ಹೇಳಿ ಹೋದವನು ಎಂಟ್ಹತ್ತು ತಿಂಗಳುಗಳವರೆಗೆ ತಿರುಗಿ ಮನೆಯ ಮಾರಿಯನ್ನೇ ನೋಡಿರದಿದ್ದ ಶಂಕ್ರ್ಯಾ, ಇದ್ದಕ್ಕಿದ್ದಂಗೆ ನಿನ್ನೆ ರಾತ್ರಿ ಮನೆಯೊಳಗೆ ಪ್ರತ್ಯಕ್ಷನಾಗಿ ಮಲ್ಲವ್ವನೊಂದಿಗೆ ಇನ್ನಿಲ್ಲದ ರಂಪಾಟ ಮಾಡಿ, ಆಕೆಯ ಗುಳದಾಳಿಯನ್ನು ಕಿತ್ತುಕೊಂಡು ಕತ್ತಲೊಳಗೆ ಕರಗಿಹೋಗುವುದರ ಮೂಲಕ ಆಕೆಯನ್ನು ಕಂಗೆಡಿಸಿಬಿಟ್ಟಿದ್ದ!

***

ಶಂಕ್ರ್ಯಾ, ಕುಡಿದ ನಿಶೆಯಲ್ಲಿ ತೂರಾಡುತ್ತ ಬಂದವನೆ ತೆರೆದ ಬಾಗಿಲನ್ನು ದಾಟಿಕೊಂಡು ಮನೆಯೊಳಗೆ ಕಾಲಿಟ್ಟಾಗ ಹೊರಗೆ ಮಬ್ಬುಗತ್ತಲಿತ್ತು. ಬೆಳಕು ಹರಿಯುವುದಕ್ಕೆ ಇನ್ನೂ ತಾಸೆರಡು ತಾಸು ಹೊತ್ತಿತ್ತು. ಆತ ಒಳಗೆ ಬಂದವನೆ ಕತ್ತಲನ್ನು ಕಣ್ತುಂಬಿಕೊಂಡು ಕುಂತಿದ್ದ ಮಲ್ಲವ್ವನ ಮುಂದೆ ನಿಂತು, 'ಲೇ, ಮಲ್ಲಿ, ಹಾದ್ರಗಿತ್ತಿ... ನನ್ಗ ಹಸಿವು ಆಗೆದ. ಊಟಕ್ಕೆ ಕೊಡು...' ಎಂದು ಜೋರು ದನಿಯಲ್ಲಿ ಅಂದ. ಆಗ, ಆತನ ದನಿಯನ್ನು ಕೇಳಿ ಮಲ್ಲವ್ವ, 'ಹ್ಞಾಂ..!' ಎನ್ನುತ್ತ ಸರಕ್ಕನೆ ವಾಸ್ತವಕ್ಕೆ ಬಂದಳು. ಹಾಗೆಯೇ, ಮೊಲೆಯನ್ನು ಬಾಯಲ್ಲಿ ಹಿಡಿದುಕೊಂಡು, ಆಕೆಯ ತೊಡೆಯ ಮೇಲೆ ನಿದ್ದೆಗೆ ಜಾರಿದ್ದ ಪರಮೇಶಿಯನ್ನು ಮೊಲೆ ಬಿಡಿಸಿ ನೆಲದ ಮೇಲೆ ಹಾಕುತ್ತ, 'ಈ ಮನ್ಯಾಗ ಏನೈತೆಂತ ತಿಳ್ದು ಹಿಂಗ್ ಕೇಳ್ತಿ? ಇಲ್ಲಿ, ಹುರುದು ತಿಂತೀನಂದ್ರ ಒಂದು ಹೆಂಚು ಕೂಡ ಇಲ್ಲ! ಅಂಥಾದ್ರಾಗ ನಿನ್ನ ಊಟಕ್ಕೆ ಎಲ್ಲಿಂದ ತಂದು ಹಾಕ್ಲಿ?' ಎಂದಳು. ನಂತರ ತುಸು ತಡೆದು ಸಿಟ್ಟಿನಲ್ಲಿ, 'ನನ್ನ ಗುಳದಾಳಿ ಮೊದ್ಲು ಕೊಡು. ಇಲ್ದಿದ್ರ ನಿನ್ನ ಜಲುಮ ಪಾಡು ಇರಂಗಿಲ್ಲ ನೋಡು' ಎಂದಳು.

ಆ ಮಾತಿಗೆ, 'ಲೇ, ಮಿಂಡ್ರಿಗುಟ್ಟಿದವಳೆ... ಏನಂದಿ? ನನ್ಗs ತಿರುಗಿ ಮಾತಾಡ್ತಿಯೇನು? ನಿನ್ನ ಗುಳದಾಳಿ ಸೆರೆ ಅಂಗಡ್ಯಾಗ ಒತ್ತೆ ಇಟ್ಟೇನಿ! ಆ ಗುಳದಾಳಿ ರೊಕ್ಕ ಮುಟ್ಟೋತಂಕ ನಾನು ಸೆರೆ ಕುಡ್ಕಂತನs ಇರತೀನಿ. ನನ್ನವು ಅದೇನು ಹರಕೊಂತಿಯೋ ಹರಕೋ ಹೋಗಲೆ ಚಿನಾಲಿ...' ಎಂದು ಶಂಕ್ರ್ಯಾ ಬಾಯಿಗೆ ಬಂದಂಗೆ ಒದರತೊಡಗಿದ.

ಆ ಹೊತ್ತಲ್ಲಿ, ಆತನ ಬಾಯಿಯಿಂದ ಬಂದ, 'ನಿನ್ನ ಗುಳದಾಳಿ ಸೆರೆ ಅಂಗಡ್ಯಾಗ ಒತ್ತೆ ಇಟ್ಟೇನಿ...' ಎಂಬ ಮಾತುಗಳು ಆಕೆಯ ಕಿವಿಯ ಮೇಲೆ ಬೀಳುತ್ತಿದ್ದಂಗೆ ಸರಕ್ಕನೆ ಎದ್ದು ನಿಂತಳು. ಇದುವರೆಗೂ ಎಲ್ಲವನ್ನೂ ಸಹಿಸಿಕೊಂಡು ಬಂದಿದ್ದ ಆಕೆ ಇನ್ನು ಈತನನ್ನು ಸಹಿಸಲಾರೆ ಎಂಬ ಮನಸ್ಥಿತಿಯನ್ನು ತಲುಪಿದ್ದಳು. ಆಕೆ ಕ್ಷಣ ಕ್ಷಣಕ್ಕೂ ಉದ್ವೇಗಕ್ಕೊಳಗಾಗುತ್ತಿದ್ದಳು. ಆ ಉದ್ವೇಗದಿಂದಾಗಿ ಸರಿಯಾಗಿ ಊಟವನ್ನು ಮಾಡದೇ ನಿತ್ರಾಣಗೊಂಡಿದ್ದ ಮಲ್ಲವ್ವನ ಮೈಯೊಳಗೆ ಅದೆಲ್ಲಿತ್ತೋ ಏನೋ ಎಂಬಂತೆ ಕಸುವು ತುಂಬಿಕೊಂಡಿತು. ಆ ಕ್ಷಣದಲ್ಲಿ ತನ್ನ ಮುತ್ತೈದೆತನವನ್ನೇ ಸೆರೆ ಅಂಗಡಿಯಲ್ಲಿ ಒತ್ತೆಯಿಟ್ಟು ಬಂದಿದ್ದ ಶಂಕ್ರ್ಯಾನ ಮೇಲೆ ಸಿಟ್ಟು ಉಕ್ಕೇರಿ ಬಂದು ಕರಕರನೆ ಹಲ್ಲು ತಿನ್ನತೊಡಗಿದಳು.

***

ಇತ್ತ ಬೆಳಗಿನ ಹಗಲು, 'ಮಲ್ಲವ್ವನ ಗಂಡ ಶಂಕ್ರ್ಯಾ ಹಾವು ಕಡ್ದು ಸತ್ತೋದ...!' ಎಂಬ ಸುದ್ದಿಯನ್ನು ಬಿತ್ತರಿಸುವುದರ ಮೂಲಕ ಮಲ್ಲವ್ವನ ಬದುಕಿಗೆ ಹೊಸ ಭಾಷ್ಯವನ್ನು ಬರೆಯತೊಡಗಿತು.

ಪ್ರತಿಕ್ರಿಯಿಸಿ: **feedback@sudha.co.in**